ಖಾಸಗಿ ಪ್ರಸಾರಕ್ಕಾಗಿ ಮಾತ್ರ

# ವಿಕಸನ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

ಆಗಸ್ಟ್ : 2013
ಸಂಪುಟ : 2
ಸಂಚಿಕೆ : 01

**ವಿಕಾಸ ಹಾದಿ**

ಬದುಕು ಎಂಬುದು ಒಂದು ಭೂಪಟವಿದ್ದಂತೆ. ಇದು ನಮ್ಮ ಮುಂದೆ ವಿಶಾಲವಾಗಿ ಹರಡಿಕೊಂಡಿರುತ್ತದೆ. ನಮ್ಮ ದಾರಿ ಮತ್ತು ಗುರಿಯನ್ನು ನಾವೇ ಹುಡುಕಿಕೊಳ್ಳಬೇಕು.

ವಿವೇಕಾನಂದ ಕಾಲೇಜು ಪುತ್ತೂರು | ತೃತೀಯ ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ | ಪುಟ : 6 | ಬೆಲೆ : 5 ರೂ

ಈ ಸಂಚಿಕೆಯ ಪ್ರಾಯೋಜಕತ್ವವನ್ನು ವಹಿಸಿಕೊಂಡಿರುವ ಪುತ್ತೂರಿನ ಕೃಷ್ಣ ಸ್ಟುಡಿಯೋದ ಮಾಲೀಕರಿಗೆ ವಿಕಸನ ಮಾಸಪತ್ರಿಕೆಯು ಆಭಾರಿಯಾಗಿರುತ್ತದೆ. – ಸಂ.

# ‘ದಕ್ಷಿಣ ಕನ್ನಡ ರಾಷ್ಟ್ರ ಚಿಂತನೆಯ ಕಾರ್ಯಾಗಾರ–ವಿವೇಕಾನಂದ ಕಾಲೇಜು ಶಕ್ತಿ ಕೇಂದ್ರ’

## 2013–2014ನೇ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಶಾಮ್ ಭಟ್



2013–14ನೇ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನೆ.

**ಪ್ರಸ್ತುತ ಕಾರ್ಯಕ್ರಮದಲ್ಲಿ ತೃತೀಯ ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ ‘ವಿಕಸನ’ದ ಬಿಡುಗಡೆ ಸಮಾರಂಭ ನಡೆಯಿತು. 2013–2014ನೇ ಸಾಲಿನ ವಿದ್ಯಾರ್ಥಿ ಪ್ರತಿನಿಧಿಗಳಾಗಿ ಆಯ್ಕೆಯಾದವರ ಭಾವಚಿತ್ರದೊಂದಿಗಿನ ಚುನಾವಣಾ ವಿಶೇಷ ಸಂಚಿಕೆ ಅದಾಗಿತ್ತು. ವೇದಿಕೆಯಲ್ಲಿ ಉಪಸ್ಥಿತರಿದ್ದ ಮುಖ್ಯ ಅತಿಥಿಗಳ ಮೂಲಕ ಪತ್ರಿಕೆ ಬಿಡುಗಡೆಗೊಂಡಿತು. ನಂತರ ಪತ್ರಿಕೆಯ ಪ್ರತಿಗಳನ್ನು ನೆರೆದಿದ್ದ ಎಲ್ಲರಿಗೂ ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಪ್ರತಿಕೋದ್ಯಮ ವಿಭಾಗದ ಮುಖ್ಯಸ್ಥ ರಾಕೇಶ್ ಕುಮಾರ್ ಕಮ್ಮಜೆ ಮಾತನಾಡಿ ಪತ್ರಿಕೆಯ ಹಿಂದಿನ ಶ್ರಮವನ್ನು ವಿವರಿಸಿದರು.**

**ವರದಿ: ಪೂಜಾ ಪಕ್ಕಳ ತೃತೀಯ ಪತ್ರಿಕೋದ್ಯಮ**

**ಪುತ್ತೂರು:** ಆಧ್ಯಾತ್ಮಿಕ ವ್ಯಕ್ತಿ ವಿವೇಕಾನಂದರು ಜಡಕಟ್ಟಿದ ಸಮಾಜವನ್ನು ಉತ್ತಮ ಮಾರ್ಗದೆಡೆಗೆ ನಡೆಸಿದವರು. ವಿವೇಕಾನಂದರ ಆದರ್ಶವುಳ್ಳ ದಕ್ಷಿಣ ಕನ್ನಡ ಬಂಡಾಯದ ಮಣ್ಣು. ರಾಜ್ಯಾದ್ಯಂತ ಖ್ಯಾತವಾಗಿರುವಂತೆ ಈ ನೆಲ ರಾಷ್ಟ್ರೀಯತೆಯ ಕಾರ್ಯಾಗಾರ, ವಿವೇಕಾನಂದ ಕಾಲೇಜು ಶಕ್ತಿ ಕೇಂದ್ರ ಎಂದು ನ್ಯಾಯವಾದಿ, ಹಿಂದೂ ಸೇವಾ ಪ್ರತಿಷ್ಠಾನ ಮೈಸೂರು ಇದರ ನಿರ್ದೇಶಕ ಒಡಿಯೂರು ಶಾಮ್ ಭಟ್ ಹೇಳಿದರು.

ಅವರು ಇಲ್ಲಿನ ವಿವೇಕಾನಂದ ಪದವಿ ಕಾಲೇಜಿನಲ್ಲಿ 2013–14ನೇ ಸಾಲಿನ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿ ಮಾತನಾಡಿದರು.

ಭವಿಷ್ಯದಲ್ಲಿ ಉತ್ತಮ ನಾಯಕನಾಗಲು ವಿದ್ಯಾರ್ಥಿ ಸಂಘ ಅಡಿಪಾಯವಿದ್ದಂತೆ. ನಾಯಕತ್ವ ವಹಿಸುವಂತಹ ಸಾಮರ್ಥ್ಯ ಹೊಂದಿರುವವ ಜೀವನದಲ್ಲಿ ತೀವ್ರಗತಿಯಲ್ಲಿ ಬೆಳೆಯುತ್ತಾನೆ. ನಾಯಕತ್ವ ವಹಿಸುವ ಅವಕಾಶವನ್ನು ಕಾಲೇಜು ಕಲ್ಪಿಸಿಕೊಟ್ಟಾಗ ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ಜವಾಬ್ದಾರಿಯೂ ಕೂಡ ವಿದ್ಯಾರ್ಥಿಗಳ ಮೇಲಿದೆ. ಕಾಲೇಜು ಎಂಬುದು ವಿದ್ಯಾರ್ಥಿಗಳಿಗೆ ಮಾನಸಿಕ ಶಕ್ತಿಯನ್ನು ತುಂಬುವ ಕೇಂದ್ರವಾಗಬೇಕು ಎಂದರು.

ವಿದ್ಯಾರ್ಥಿ ನಾಯಕ ವಿದ್ಯಾರ್ಥಿಗಳಿಗೆ ಸದಾ ಲಭ್ಯನಾಗಿರಬೇಕು. ಕಾಲೇಜಿನಲ್ಲಿ ಒಳ್ಳೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ವಿದ್ಯಾರ್ಥಿ ಸಂಘದವರು ಸದಾ ಸಿದ್ಧರಿರಬೇಕು. ಇಂದು ಎಂದು ಅ ಕಾರ್ಯದರ್ಶಿ ವಿ.ವಿ ಭಟ್ ಮಾತನಾಡಿ, ವಿದ್ಯಾರ್ಥಿ ಸಂಘ ಕಾಲೇಜಿನ ಆಡಳಿತ ಮಂಡಳಿ ಜೊತೆಗೂಡಿ ಕಾರ್ಯನಿರ್ವಹಿಸುವ ಅಗತ್ಯವಿದೆ. ವಿದ್ಯಾರ್ಥಿಗಳು ಉತ್ತಮ ಸಾಮಾಜಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ಉತ್ತಮ ಗುಣನಡತೆಗಳನ್ನು ರೂಡಿಸಿಕೊಳ್ಳಬೇಕು. ವಿದ್ಯಾರ್ಥಿ ನಾಯಕರು ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ತ್ಯಜಿಸಿ, ಸಾಮಾಜಿಕ ಬದ್ಧತೆಗೆ ದುಡಿಯಬೇಕು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು.

ಮತ್ತೋರ್ವ ಅತಿಥಿ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಪ್ರಥಮ ದರ್ಜೆ ಕಾಲೇಜಿನ ಪಾಂಶುಪಾಲ ಪ್ರೊ. ದಿನೇಶ್ ಕಾಮತ್ ಮಾತನಾಡಿ, ಪ್ರಪಂಚದಲ್ಲಿ ವಿದ್ಯಾದಾನವೆಂಬುದು ಮಹತ್ತರವಾದುದು. ವಿದ್ಯೆ ಒಬ್ಬ ವ್ಯಕ್ತಿ ತನ್ನ ಬದುಕನ್ನು ಕಟ್ಟಿಕೊಳ್ಳಲು ನೆರವಾಗುತ್ತದೆ. ನೇರ ಮಾತು, ನೇರ ನಡೆಯಿರುವವನು ಮಾತ್ರ ಸಮರ್ಥ ನಾಯಕನಾಗಲು ಸಾಧ್ಯ. ವಿದ್ಯಾರ್ಥಿ ಸಂಘ, ಅಧ್ಯಾಪಕರ ಸಹಕಾರದೊಂದಿಗೆ ಕಾಲೇಜಿನಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ. ಇಂದು ಸಮಾಜದಲ್ಲಿ ವಿದ್ಯಾರ್ಥಿಗಳನ್ನು ದಾರಿತಪ್ಪಿಸುವ ಅನೇಕ ಸಂಗತಿಗಳಿವೆ ಈ ಬಗ್ಗೆ ವಿದ್ಯಾರ್ಥಿಗಳು ಎಚ್ಚರವಹಿಸಬೇಕು ಎಂದು ಹೇಳಿದರು.

> **“ದೇಶದಲ್ಲಿ ಸಮರ್ಥ ನಾಯಕರ ಕೊರತೆ ಇದೆ. ಅತ್ಯುತ್ತಮ ಉದ್ಯೋಗ ಪಡೆದು, ಉತ್ತಮ ನಾಗರಿಕತೆಯಿರುವ, ದೇಶವನ್ನು ಪ್ರೀತಿಸುವಂತಹ ನಾಯಕರ ಅಗತ್ಯವಿದೆ. ಅಂತಹ ನಾಯಕನನ್ನು ರೂಪಿಸಲು ವಿದ್ಯಾರ್ಥಿ ಸಂಘ ಅವಕಾಶ ಕಲ್ಪಿಸಿಕೊಡುತ್ತದೆ.”**
>
> **– ಒ. ಶಾಮ್ ಭಟ್**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಆಡಳಿತ



ಒಡಿಯೂರು ಶಾಮ್ ಭಟ್ ಮಾತನಾಡುತ್ತಿರುವುದು

ಮಂಡಳಿ ಅಧ್ಯಕ್ಷ ಶ್ರೀನಿವಾಸ ಪೈ ಮಾತನಾಡುತ್ತಾ, ವಿದ್ಯಾರ್ಥಿ ಸಂಘವು ಪ್ರಾಂಶುಪಾಲ ಮತ್ತು ವಿದ್ಯಾರ್ಥಿಗಳ ನಡುವೆ ಮಾತ್ರವಲ್ಲದೇ ಆಡಳಿತ ಮಂಡಳಿ ಮತ್ತು ವಿದ್ಯಾರ್ಥಿಗಳ ನಡುವಿನ ಕೊಂಡಿ. ಹಾಗಾಗಿ ಜವಾಬ್ದಾರಿಯಿಂದ ನಡೆದುಕೊಂಡು ಹೋಗುವ ಅಗತ್ಯವಿದೆ ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಮಾಧವ ಭಟ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ವೇದಿಕೆಯಲ್ಲಿ ವಿದ್ಯಾರ್ಥಿ ಕ್ಷೇಮ ಪಾಲನ ಅಧಿಕಾರಿ, ಅರ್ಥಶಾಸ್ತ್ರ ಉಪನ್ಯಾಸಕ ಡಾ.ವಿಘ್ನೇಶ್ವರ ವರ್ಮುಡಿ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ರಸಾಯನಶಾಸ್ತ್ರ ಉಪನ್ಯಾಸಕ ಪ್ರೊ. ಕೃಷ್ಣ ಕಾರಂತ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ನಂತರ ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ ‘ವಿಕಸನ’ ಇದರ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರವಣ್ ಭಂಡಾರ್‌ಕರ್ ಸ್ವಾಗತಿಸಿದರು. ಕಾರ್ಯದರ್ಶಿ ಅಭಿಷೇಕ್ ಎ.ಜಿ ವಂದಿಸಿದರು. ವಿದ್ಯಾರ್ಥಿನಿಯರಾದ ನಿಶಾ ಮತ್ತು ತಂಡದವರು ಪ್ರಾರ್ಥಿಸಿದರು.

# ಜ್ಞಾನ ಪಸರಿಸುವಿಕೆಯಲ್ಲಿ ವಿಚಾರ ಸಂಕಿರಣಗಳ ಪಾತ್ರ ಹಿರಿದು: ಡಾ. ಬೋಟ್ಲಾ

● ವರದಿ : ನಮ್ಮ ಪ್ರತಿನಿಧಿಯಿಂದ




**ಪುತ್ತೂರು:** ರಸಾಯನ ಶಾಸ್ತ್ರ ವಿಜ್ಞಾನದ ಪ್ರತಿಯೊಂದು ವಿಭಾಗಕ್ಕೂ ಅನ್ವಯವಾಗುವಂತದ್ದು. ಅದರಲ್ಲೂ ಎಲೆಕ್ಟ್ರೋಮ್ಯಾಗ್ನೆಟಿಕ್ ರೇಡಿಯೇಷನ್ ಬಗೆಗಿನ ಚರ್ಚೆ ವಿಜ್ಞಾನ ವಲಯದಲ್ಲಿ ಅತ್ಯಂತ ಪ್ರಸ್ತುತವಾದದ್ದು. ಈ ಬಗೆಗಿನ ಚರ್ಚೆ ಹೊಸ ಜ್ಞಾನವನ್ನು ನೀಡುವಲ್ಲಿ ಸಹಕಾರಿಯೆನಿಸುತ್ತದೆ ಎಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಮುಖ್ಯ ವಿಜ್ಞಾನಿ ಡಾ.ಪ್ರಸಾದ್ ವಿಷ್ಣು ಬೋಟ್ಲಾ ಹೇಳಿದರು. ಅವರು ಇಲ್ಲಿನ ವಿವೇಕಾನಂದ ಕಾಲೇಜಿನಲ್ಲಿ ಇತ್ತೀಚಿಗೆ ರಸಾಯನ ಶಾಸ್ತ್ರ ವಿಭಾಗ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ರಸಾಯನ ಶಾಸ್ತ್ರ ಅಧ್ಯಾಪಕರ ಸಂಘದ ಸಹಯೋಗದಲ್ಲಿ ನಡೆದ ಅಪ್ಲಿಕೇಶನ್ ಆಫ್ ಎಲೆಕ್ಟ್ರೋಮ್ಯಾಗ್ನೆಟಿಕ್ ರೇಡಿಯೇಷನ್ ಎನ್ನುವ ವಿಷಯದ ಬಗೆಗಿನ ಒಂದು ದಿನದ ಯು.ಜಿ.ಸಿ. ಪ್ರಾಯೋಜಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು. ಯಾವ ವ್ಯಕ್ತಿಗೂ ಎಲ್ಲಾ ಕ್ಷೇತ್ರಗಳಲ್ಲೂ ನುರಿತವೆನಿಸಲು ಸಾಧ್ಯವಿಲ್ಲ. ಆದರೆ ಕೆಲವೊಂದು ವಿಷಯಗಳಲ್ಲಾದರೂ ಉತ್ತಮ ಜ್ಞಾನ ಹೊಂದಿರಬೇಕು. ಪಡೆದುಕೊಂಡ ಜ್ಞಾನ ವರ್ಷಾನುವರ್ಷಗಳ ನಂತರವೂ ಉಪಯೋಗಕ್ಕೆ ಬರುತ್ತದೆ. ಜ್ಞಾನದ ಪಸರಿಸುವಿಕೆ ಯಲ್ಲಿ ವಿಚಾರ ಸಂಕಿರಣಗಳು ಮಹತ್ತರ ಪಾತ್ರವಹಿಸುತ್ತವೆ ಯೆಂದು ನುಡಿದರು.

ವಿಚಾರ ಸಂಕಿರಣಗಳು ಕೇವಲ ವಿದ್ಯಾರ್ಥಿ ಗಳಿಗೆ ಮಾತ್ರವಲ್ಲದೆ ಅಧ್ಯಾಪಕರಿಗೂ ಮಾರ್ಗದರ್ಶಿ. ಅದರಲ್ಲೂ ಅಧ್ಯಾಪಕರು ಹೆಚ್ಚು ಹೆಚ್ಚು ಜ್ಞಾನವನ್ನು ಸಂಪಾದಿಸಬೇಕಾದದ್ದು ಅಗತ್ಯ. ಅಧ್ಯಾಯನವನ್ನು ನಿಲ್ಲಿಸಿದ ಅಧ್ಯಾಪಕ ಉತ್ತಮ ಮಾರ್ಗದರ್ಶಕನಾಗಲಾರ. ಈ ಹಿನ್ನೆಲೆಯಲ್ಲಿ ವಿಜ್ಞಾನದ ವಿವಿಧ ವಿಷಯಗಳ ಬಗೆಗೆ ಅಧ್ಯಾಪಕರು ತಿಳಿದುಕೊಳ್ಳಬೇಕು. ಈ ಮೂಲಕ ವಿದ್ಯಾರ್ಥಿಗಳಿಗೆ ಪ್ರೇರೇಪಕರಾಗಬೇಕು ಎಂದರು.

ಮತ್ತೋರ್ವ ಅತಿಥಿ ಧಾರವಾಡ ವಿಶ್ವವಿದ್ಯಾನಿಲಯದ ಸ್ನಾತ್ತ–ಕೋತ್ತರ ರಸಾಯನ ಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕಿ ಡಾ.ಭಾರತಿ ಬಾದಾಮಿ ಮಾತನಾಡಿ ವಿದ್ಯಾರ್ಥಿಗಳು ಪಠ್ಯ ಪುಸ್ತಕವನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಯಾರೋ ಮಾಡಿಟ್ಟ ನೋಟ್ ಪುಸ್ತಕವನ್ನು ಜೆರಾಕ್ಸ್ ಮಾಡಿಕೊಂಡು ಓದುವುದರಿಂದ ಜ್ಞಾನ ಹೆಚ್ಚಿಸಲು ಸಾಧ್ಯವಿಲ್ಲ. ಬದಲಾಗಿ ಉತ್ತಮ ಭವಿಷ್ಯ ಕಮರಿ ಹೋಗುವ ಅಪಾಯವಿದೆ ಎಂದರಲ್ಲದೆ ವಿಷಯವೊಂದರ ಆಳಕ್ಕಿಳಿದು ಸಮಗ್ರ ಮಾಹಿತಿ ಪಡೆಯಬೇಕು ಎಂದು ತಿಳಿಸಿದರು.




ಡಾ.ಪ್ರಸಾದ್ ವಿಷ್ಣು ಬೋಟ್ಲಾ ಉದ್ಘಾಟಿಸಿದರು

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಎಚ್. ಮಾಧವ ಭಟ್ ಮಾತನಾಡಿ ವಿವೇಕಾನಂದ ಕಾಲೇಜಿನಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಅಧ್ಯಾಪಕರಲ್ಲಿ ಮಾತ್ರವಲ್ಲದೆ ವಿದ್ಯಾರ್ಥಿಗಳೂ ಸಂಶೋಧನಾ ಪ್ರವೃತ್ತಿ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ವಿಚಾರ ಸಂಕಿರಣಗಳು ಅವಶ್ಯವೆನಿಸಿದೆ ಎಂದು ನುಡಿದರು. ವೇದಿಕೆಯಲ್ಲಿ ಕಾಲೇಜಿನ ಸ್ಥಾಪಕ ಸಂಚಾಲಕ ಕೆ.ರಾಮ್ ಭಟ್ ಉಪಸ್ಥಿತರಿದ್ದರು. ಕಾಲೇಜಿನ ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊಫೆಸರ್ ಕೃಷ್ಣ ಕಾರಂತ ಪ್ರಸ್ತಾವಿಸಿ ಸ್ವಾಗತಿಸಿದರು. ವಿಜ್ಞಾನ ಸಂಘದ ಸಂಚಾಲಕ ಡಾ.ಸುಧಾಕರನ್ ಟಿ. ವಂದಿಸಿದರು.